11) ರೇಷ್ಮೆ ಹುಳುಗಳಿಗೆ ದಿನಕ್ಕೆ "ಒಂದು ಬಾರಿ ಸೊಪ್ಪು" ನೀಡಿ ಸಾಕಾಣಿಕೆ ಮಾಡುವ ವಿಧಾನ.

12) ರೇಷ್ಮೆ ನೂಲು ಬಿಚ್ಚಾಣಿಕಾ ತಂತ್ರಜ್ಞಾನ.

13) ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ದೀನಿಯರ್ ಸೂಚಕ.

14) ಬೀಸು ಪ್ರತ್ಯೇಕಿಸುವ ಯಂತ್ರ.

15) ಕೊರೆದ ಗೂಡಿನಿಂತ ರೇಷ್ಮೆ ನೂಲುವ ಯಂತ್ರ.

16) ಊಜಿ ನೊಣದ ನಿಯಂತ್ರಣಕ್ಕೆ ಊಜಿ ಮಡಿ.

17) ರೇಷ್ಮೆ ಮೊಟ್ಟೆ ಸಾಗಾಣಿಕೆ ಪೆಟ್ಟಿಗೆ.

18) ಸುಲಭ ರೀತಿಯ ಕಪ್ಪು ಪೆಟ್ಟಿಗೆಯಲ್ಲಿ ಚಾಕಿ ಮಾಡುವ ವಿಧಾನ.

19) ಸುಲಭ ರೀತಿಯಲ್ಲಿ ಮೊಟ್ಟೆಯನ್ನು ಪರಿಪಾಕಿಸುವ ಮತ್ತು ಸೊಪ್ಪು ತೆಖಿರಣೆ ವಿಧಾನ.

ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ.

2074 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರುವ ಒಟ್ಟು ಸಕ್ಕರೆ ಕಾರ್ಖಾನೆಗಳೆಷ್ಟು; ಖಾಸಗಿ ಮತ್ತು ಸಹಕಾರ ಸಕ್ಕರೆ ಕಾರ್ಖಾನೆಗಳೆಷ್ಟು; (ಪೂರ್ಣ ವಿವರಗಳೊಡನೆ ಮಾಹಿತಿ ಒದಗಿಸುವುದು).

ಆ) ರಾಜ್ಯದಲ್ಲಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಕಾರ್ಯ ಪ್ರಾರಂಭವಾಗಿವೆಯೇ; ಯಾವಾಗ ಪ್ರಾರಂಭವಾಗಿದೆ; (ಪೂರ್ಣ ವಿವರಗಳೊಡನೆ ಮಾಹಿತಿ ಒದಗಿಸುವುದು);

ಇ) ಸಕ್ಕರೆ ಕಾರ್ಖಾನೆಗಳು ಒಂದು ಟನ್ನಿಗೆ ಕೊಡುತ್ತಿರುವ ಬೆಲೆ ಮತ್ತು ಸೌಕರ್ಯಗಳು ಪೂರ್ಣ ವಿವರಗಳೊಡನೆ ಕೊಡುವುದು;

ಈ) ಪ್ರಾರಂಭವಾಗದೆ ಇರುವ ಕಾರ್ಖಾನೆಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ವಿವರಗಳನ್ನು ಅಡಕ - ಅ ರಲ್ಲಿ ತೋರಿಸಲಾಗಿದೆ.

ಆ) ವಿವರಗಳನ್ನು ಅಡಕ - ಆ ರಲ್ಲಿ ತೋರಿಸಲಾಗಿದೆ.

ಇ) ವಿವರಗಳನ್ನು ಅಡಕ - ಆ ದಲ್ಲಿ ತೋರಿಸಲಾಗಿದೆ.

ಈ) ಸಾಮಾನ್ಯವಾಗಿ ರಾಜ್ಯದ ದಕ್ಷಿಣ ಭಾಗದ ಸಕ್ಕರೆ ಕಾರ್ಖಾನೆಗಳು ಜೂಲೈ ತಿಂಗಳಲ್ಲಿ ಕಬ್ಬು ಅರೆಯುವಿಕೆಯನ್ನು ಪ್ರಾರಂಭಿಸುತ್ತವೆ. ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯನ್ನು ಹೊರತು ಪಡಿಸಿದರೆ ಈ ಭಾಗದ ಉಳಿದೆಲ್ಲಾ ಕಾರ್ಖಾನೆಗಳು ಆರಂಭವಾಗಿ, ರಾಜ್ಯದ ಉಳಿದೆಲ್ಲಾ ಸಕ್ಕರೆ ಕಾರ್ಖಾನೆಗಳು ಸಾಮಾನ್ಯವಾಗಿ ಅಕ್ಟೋಬರ್:ನವೆಂಬರ್ ತಿಂಗಳಲ್ಲಿ ಪ್ರಾರಂಭವಾಗುತ್ತವೆ.

ಅಡಕ - ಅ

ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು (ಜಿಲ್ಲಾವಾರು)

ಕ್ರ. ಸಂ.	*ಕಾರ್ಖಾನೆಯ ಹೆಸರು*	*ವಲಯ*	*ಅರೆಯುವ ಸಾಮರ್ಥ್ಯ (ಟಿ.ಸಿ.ಡಿ)*
1	2	3	4
ಬೆಳಗಾಂ ಜಿಲ್ಲೆ :			
1)	ದೂದಗಂಗಾಕೃಷ್ಣಾ ಸಸಕಾ ನಿ. ಚಿಕ್ಕೋಡಿ.	ಸಹಕಾರಿ ವಲಯ	3500
2)	ಘಟಪ್ರಭಾ ಸಸಕಾ ನಿ. ಗೋಕಾಕ್	ಸಹಕಾರಿ ವಲಯ	1250
3)	ಹಾಲಸಿದ್ಧನಾಥ ಸಸಕಾ ನಿ. ನಿಪ್ಪಾಣಿ	ಸಹಕಾರಿ ವಲಯ	1250
4)	ಹಿರಣ್ಯಕೇಶಿ ಸಸಕಾ ನಿ. ಸಂಕೇಶ್ವರ	ಸಹಕಾರಿ ವಲಯ	5000
5)	ಮಲಪ್ರಭಾ ಸಸಕಾ ನಿ.ಎಂ.ಕೆ. ಹುಬ್ಬಳ್ಳಿ	ಸಹಕಾರಿ ವಲಯ	3500
6)	ರಾಯಬಾಗ್ ಸಸಕಾ ನಿ. ರಾಯಬಾಗ್	ಸಹಕಾರಿ ವಲಯ	1250
7)	ಉಗಾರ್ ಶುಗರ್ ಮಿಲ್ಸ, ಉಗಾರಖುರ್ದ	ಖಾಸಗಿ ವಲಯ	5000
ವಿಜಾಪುರ ಜಿಲ್ಲೆ :			
8)	ನಂದಿ ಸಸಕಾ ನಿ. ಕೃಷ್ಣಾನಗರ	ಸಹಕಾರಿ ವಲಯ	2500
9)	ಗೋದಾವರಿ ಶುಗರ್ಸ್ ಲಿ. ಸಮೀರವಾಡಿ.	ಖಾಸಗಿ ವಲಯ	5000

1	2	3	4
	ಬೀದರ್ ಜಿಲ್ಲೆ :		
10)	ಬೀದರ್ ಸಸಕಾ ನಿಯ ಹಳ್ಳಿಖೇಡ ಬಳ್ಳಾರಿ ಜಿಲ್ಲೆ :	ಸಹಕಾರಿ ವಲಯ	3500
11)	ಕಂಪ್ಲಿ ಸಸಕಾ ನಿ. ಕಂಪ್ಲಿ (ಕಾರ್ಖಾನೆಯನ್ನು ಸಮಾಪನೆಗೊಳಿಸಲಾಗಿದೆ.)	ಸಹಕಾರಿ ವಲಯ	1200
12)	ಇಂಡಿಯಾ ಶುಗರ್ಸ ಮತ್ತು ರಿಫೈನರೀಸ್, ಹೊಸಪೇಟೆ.	ಖಾಸಗಿ ವಲಯ	2000
13)	ಸಿರಗುಪ್ಪ ಶುಗರ್ಸ ಮತ್ತು ಕೆಮಿಕಲ್ಸ್ (ಲಿ) ದೇಶನೂರು.	ಖಾಸಗಿ ವಲಯ	1500
	ಚಿತ್ರದುರ್ಗ ಜಿಲ್ಲೆ :		
14)	ಭದ್ರಾ ಸಸಕಾ ನಿ. ದೊಡ್ಡಬಾತಿ	ಸಹಕಾರಿ ವಲಯ	1250
15)	ವಾಣಿವಿಲಾಸ ಸಸಕಾ (ನಿ) ಹಿರಿಯೂರು	ಸಹಕಾರಿ ವಲಯ	1250
16)	ದಾವಣಗೆರೆ ಶುಗರ್ಸ, ಕುಕ್ಕವಾಡ	ಜಂಟಿ ವಲಯ	1250
	ದಕ್ಷಿಣ ಕನ್ನಡ ಜಿಲ್ಲೆ :		
17)	ದಕ್ಷಿಣ ಕನ್ನಡ ಸಸಕಾ ನಿ. ಬ್ರಹ್ಮಾವರ	ಸಹಕಾರಿ ವಲಯ	1250
	ಧಾರವಾಡ ಜಿಲ್ಲೆ :		
18)	ಕರ್ನಾಟಕ ಸಸಕಾ ನಿ. ಹಾವೇರಿ	ಸಹಕಾರಿ ವಲಯ	1250
	ಗುಲ್ಬರ್ಗಾ ಜಿಲ್ಲೆ :		
19)	ಆಳಂದ ಸಸಕಾ ನಿ. ಭೂಸನೂರು	ಸಹಕಾರಿ ವಲಯ	1250

1	2	3	4
ಕೋಲಾರ ಜಿಲ್ಲೆ :			
20)	ಸಿರಗುಪ್ಪ ಶುಗರ್ಸ ಅಂಡ್ ಕೆಮಿಕಲ್ಸ್ ಲಿ. ಗೌರಿಬಿದನೂರು.	ಖಾಸಗಿ ವಲಯ	1250
ಹಾಸನ ಜಿಲ್ಲೆ :			
21)	ಹೇಮಾವತಿ ಸಸಕಾ ನಿ. ಶ್ರೀನಿವಾಸಪುರ	ಸಹಕಾರಿ ವಲಯೆ	1250
ಮಂಡ್ಯ ಜಿಲ್ಲೆ :			
22)	ಪಾಂಡವಪುರ ಸಸಕಾ ನಿ. ಪಾಂಡವಪುರ	ಸಹಕಾರಿ ವಲಯ	1500
23)	ಮೈಶುಗರ್ ಕಂ. ಮಂಡ್ಯ	ಸಾರ್ವಜನಿಕ ವಲಯ	5000
24)	ಶ್ರೀ ಚಾಮುಂಡೇಶ್ವರಿ ಶುಗರ್ಸ (ಲಿ) ಕೆ.ಎಂ. ದೊಡ್ಡಿ.	ಖಾಸಗಿ ವಲಯ	4000
ಮೈಸೂರು ಜಿಲ್ಲೆ :			
25)	ಶ್ರೀ ಶ್ರೀರಾಮ ಸಸಕಾ ನಿಯ ಚುಂಚನಕಟ್ಟೆ	ಸಹಕಾರಿ ವಲಯ	1250
26)	ಮಹದೇಶ್ವರ ಶುಗರ್ಸ್ (ಲಿ) ನಂಜನಗೂಡು	ಖಾಸಗಿ ವಲಯ	2500
27)	ಬನ್ನಾರಿಅಮ್ಮನ್ ಶುಗರ್ಸ್ (ಲಿ) ನಂಜನಗೂಡು	ಖಾಸಗಿ ವಲಯ	2500
ರಾಯಚೂರು ಜಿಲ್ಲೆ :			
28)	ಗಂಗಾವತಿ ಶುಗರ್ಸ್ ಗಂಗಾವತಿ	ಜಂಟಿವಲಯ	2500
ಶಿವಮೊಗ್ಗ ಜಿಲ್ಲೆ :			
29)	ಮೈಸೂರು ಪೇಪರ್ ಮಿಲ್ಸ್ ಅಂಡ್ ಶುಗರ್ಸ್ (ಲಿ) ಭದ್ರಾವತಿ.	ಸಾರ್ವಜನಿಕ ವಲಯ	2500
30)	ತುಂಗಭದ್ರಾ ಶುಗರ್ಸ್ ಮಿಲ್ಸ್ (ಲಿ) ಶಿವಮೊಗ್ಗ.	ಖಾಸಗಿ ವಲಯ	2500

ಅಡಕ - ಆ

1995-96ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಿದ ದಿನಾಂಕ.

ಕ್ರಮ ಸಂಖ್ಯೆ	*ಕಾರ್ಖಾನೆಯ ಹೆಸರು*	*ಪ್ರಾರಂಭಿಸಿದ ದಿನಾಂಕ*	*ಕಬ್ಬಿನ ಬೆಲೆ (ರೂ.ಗಳಲ್ಲಿ)*
1)	ಪಾಂಡವಪುರ	16.8.95	560.00 (ಮುಂಗಡ)
2)	ಮೈಶುಗರ್	12.7.95	710.00
3)	ಬನ್ನಾರಿ ಅಮ್ಮನ್ ಶುಗರ್ಸ	27.7.95	700.00
4)	ಹೇಮಾವತಿ	8.8.95	675.00
			720.00 ಹೊಸ ತಳಿಗೆ
5)	ಶ್ರೀ ಶ್ರೀರಾಮ	9.5.95	600.47
6)	ಶ್ರೀ ಚಾಮುಂಡೇಶ್ವರಿ ಶುಗರ್ಸ	3.9.95	710.00
7)	ಭದ್ರಾ	4.9.95	
8)	ದಾವಣಗೆರೆ	8.9.95	670.00

ರಾಜ್ಯದ ಉಳಿದ ಕಾರ್ಖಾನೆಗಳು ಇನ್ನೂ ಕಾರ್ಯಾರಂಭ ಮಾಡಿರುವುದಿಲ್ಲ.

ಮೊದಲನೇ "ಇ" ಗ್ರೂಪಗೆ ಸೇರಿದ ವಿದ್ಯಾರ್ಥಿಗಳಿಂದ ಭೋದನಾ ಶುಲ್ಕ ವಸೂಲು ಮಾಡುತ್ತಿರುವ ಬಗ್ಗೆ.

2076 - ಡಾ : ಎಂ. ಪಿ. ಕರ್ಕಿ (ಕುಮಟಾ) : ಮಾನ್ಯ ಸಮಾಜ ಕಲ್ಯಾಣ ಇಲಾಖೆ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿ.ಯು.ಸಿ. ಹಾಗೂ ಡಿಗ್ರಿ ಕಾಲೇಜುಗಳಲ್ಲಿ ಮೊದಲನೇ 'ಇ' ಗ್ರೂಪಗೆ ಸೇರಿದ ವಿದ್ಯಾರ್ಥಿಗಳಿಂದ (3,600 ರೂ. ವಾರ್ಷಿಕ ವರಮಾನ ಇರುವವರು) ಭೋದನಾ ಶುಲ್ಕ ಹಾಗೂ ಇತರ ಶುಲ್ಕಗಳನ್ನು ವಸೂಲಿ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಚಿನ್ನಪ್ಪ ರೆಡ್ಡಿ ಆಯೋಗ ಆಧಾರಿತ ಮೀಸಲಾತಿಯನ್ನು ಶಿಕ್ಷಣ ಕ್ಷೇತ್ರಕ್ಕೆ ಅನ್ವಯವಾಗುತ್ತದೆಯೇ;